# ನಿಮ್ಮೊಡನೆ

## ಮಹಾಮಳೆಯ ‘ಮಹಿಮೆ’

ಮಳೆ ಎಂದರೆ ‘ದೇವರ ವರ’ ಎಂದೇ ನಂಬುವವರಿದ್ದಾರೆ. ಬೇಸಿಗೆಯಲ್ಲಿ ಸುಡುವ ಬಿಸಿಲಿಗೆ ಬರಡಾಗುವ ಭೂಮಿ ಮಳೆ ಸುರಿದ ಬಳಿಕ ಅರಳುವ ಪರಿಯೇ ಅದ್ಭುತ. ಒಣಗಿದ ಭೂಮಿಯಲ್ಲಿ ಬಿದ್ದ ಸುರಿಮಳೆಯಿಂದಾಗಿ ಅಸಂಖ್ಯಾತ ಜೀವರಾಶಿಗಳು ಕುಡಿಯೊಡೆಯುವುದು ಇನ್ನೊಂದು ಮಹಾ ಅದ್ಭುತ. ವಸುಧೆಯ ಮೈಯರಳುವ ಈ ಸೃಷ್ಟಿಕ್ರಿಯೆ ಮನುಷ್ಯ ಜೀವನಕ್ಕೂ ಚೇತೋಹಾರಿ. ಆದರೆ ಈಗ ಮಳೆ ಎಂದರೆ ಮಹಾನಗರಗಳ ಜನ ಬೆಚ್ಚಿ ಬೀಳುತ್ತಾರೆ! ‘ದೇವರೇ, ಧಾರಾಕಾರ ಮಳೆ ಕೊಡಬೇಡ’ ಎಂದು ಕೈಮುಗಿಯುತ್ತಾರೆ! ಭಾರೀ ಮಳೆಯಿಂದ ಮನೆಗಳು ಕುಸಿದು ಬೀಳುವ, ತೆರೆದ ಚರಂಡಿಯಲ್ಲಿ ಪುಟ್ಟ ಮಕ್ಕಳು ಕೊಚ್ಚಿ ಹೋಗುವ ಸುದ್ದಿಗಳು ಈಗ ಅಪರೂಪವಲ್ಲ. ಬೆಂಗಳೂರು ಸಹಿತ ರಾಜ್ಯದ ಎಲ್ಲ ಮಹಾನಗರಗಳಲ್ಲೂ ಇದೇ ಸ್ಥಿತಿ. ಒಂದು ದೊಡ್ಡ ಮಳೆ ಬಿದ್ದರೆ ಇಡೀ ಮಹಾನಗರಗಳ ಸ್ಥಿತಿ ಆಯೋಮಯ. ಮನೆಯೊಳಕ್ಕೆ ನೀರು ನುಗ್ಗುವುದು ಸಾಮಾನ್ಯ. ಕುಡಿಯುವ ನೀರು ಮತ್ತು ಕೊಳಚೆ ನೀರು ಒಟ್ಟಾಗಿ ಜನರಿಗೆ ನರಕ ಯಾತನೆ. ಅದರಲ್ಲೂ ರಾತ್ರಿ ಸುರಿಯುವ ಮಳೆ ಮಹಾನಗರ ಪಾಲಿಕೆಗಳ ಅಗಾಧ ಭ್ರಷ್ಟಾಚಾರದ ಭಯಾನಕ ಸತ್ಯಗಳನ್ನೂ ಬಯಲಿಗಿಡುತ್ತಿದೆ.

ಒಂದು ಕಾಲದಲ್ಲಿ ಹರಪ್ಪ, ಮೊಹೆಂಜದಾರೊ ನಗರಗಳಲ್ಲಿ ಅತ್ಯುತ್ತಮ ನಗರ ನೈರ್ಮಲ್ಯ ವ್ಯವಸ್ಥೆ ಇತ್ತು ಎಂದು ಮಕ್ಕಳಿಗೆ ನಾವು ಪಠ್ಯಪುಸ್ತಕಗಳಲ್ಲಿ ಬೋಧಿಸುತ್ತೇವೆ. ಆದರೆ ಇವತ್ತಿನ ಮಹಾನಗರಗಳನ್ನು ನೋಡಿದರೆ ಒಂದು ಗಂಟೆಯ ಬಿರುಸು ಮಳೆಯನ್ನೂ ಎದುರಿಸಲಾಗದೆ ನಡುಗುತ್ತಿವೆ. ನಮ್ಮ ಆಧುನಿಕ ವಿದ್ಯೆ, ತಂತ್ರಜ್ಞಾನದ ತಿಳುವಳಿಕೆ, ನಾಗರಿಕ ಪ್ರಜ್ಞೆ ಎಲ್ಲವನ್ನೂ ಮಹಾಮಳೆ ಪದೇ ಪದೇ ಅಣಕಿಸುತ್ತದೆ! ಪ್ರತಿ ಸಲ ಮಳೆ ಬಿದ್ದು ಜೀವಹಾನಿಯಾದಾಗಲೂ ಪಾಲಿಕೆಯ ಒಂದಿಬ್ಬರು ಅಧಿಕಾರಿಗಳನ್ನು ಕರ್ತವ್ಯಲೋಪದ ಮೇಲೆ ಅಮಾನತು ಮಾಡಲಾಗುತ್ತದೆ. ಕೆಲವು ವಾರಗಳ ಬಳಿಕ ಅವರು ಮತ್ತೆ ಸೇವೆಗೆ ಮರಳುತ್ತಾರೆ. ಎಂದಿನಂತೆ ಅವರ ಸೊಂಭೇರಿತನ, ಭ್ರಷ್ಟಾಚಾರಗಳು ಮುಂದುವರಿಯುತ್ತವೆ.

ಇವತ್ತಿನ ಮಹಾನಗರಗಳು ಕೇವಲ ಒಂದು ಗಂಟೆಯ ಬಿರುಸು ಮಳೆಯನ್ನೂ ಎದುರಿಸಲಾಗದೆ ನಡುಗುತ್ತಿವೆ. ನಮ್ಮ ಆಧುನಿಕ ವಿದ್ಯೆ, ತಂತ್ರಜ್ಞಾನದ ತಿಳುವಳಿಕೆ, ನಾಗರಿಕ ಪ್ರಜ್ಞೆ ಎಲ್ಲವನ್ನೂ ಮಹಾಮಳೆ ಪದೇ ಪದೇ ಅಣಕಿಸುತ್ತದೆ! ದುರಂತಗಳಲ್ಲಿ ಮುದ್ದು ಕಂದಮ್ಮಗಳು ಜೀವ ಕಳೆದುಕೊಳ್ಳುತ್ತವೆ.

ಬೆಂಗಳೂರು ಮಹಾನಗರದ ಉದಾಹರಣೆಯನ್ನೇ ಗಮನಿಸಿ– ಇಲ್ಲಿರುವ ಸರ್ಕಾರಿ ಜಮೀನು 62 ಸಾವಿರ ಎಕರೆ. ಇದರಲ್ಲಿ 34 ಸಾವಿರ ಎಕರೆ ಸರ್ಕಾರಿ ಜಮೀನು ಅಕ್ರಮವಾಗಿ ಒತ್ತುವರಿಯಾಗಿದೆಯಂತೆ! ಈ ಒತ್ತುವರಿ ಮುಖ್ಯವಾಗಿ ಆಗಿರುವುದು ಕೆರೆ ಅಂಗಳ, ರಾಜಕಾಲುವೆ, ಫುಟ್‌ಪಾತ್ ಮತ್ತು ರಸ್ತೆಗಳಲ್ಲಿ. ಬೆಂಗಳೂರಿನಲ್ಲಿ 15–20 ವರ್ಷಗಳ ಹಿಂದೆ ಇದ್ದ ಸುಮಾರು 11 ಕೆರೆಗಳು ಈಗಾಗಲೆ ಕಣ್ಮರೆಯಾಗಿವೆ. ಆ ಸ್ಥಳಗಳಲ್ಲಿ ಬಸ್‌ನಿಲ್ದಾಣ, ಬಹುಮಹಡಿ ಅಪಾರ್ಟ್‌ಮೆಂಟ್‌ಗಳು, ವಾಣಿಜ್ಯ ಮಳಿಗೆಗಳು, ಕ್ರೀಡಾಂಗಣಗಳು ತಲೆ ಎತ್ತಿವೆ. ದೊಡ್ಡದೊಂದು ಮಳೆ ಸುರಿದರೆ ನೀರು ನೇರವಾಗಿ ಹಿಂದಿನ ಕೆರೆಗಳಿಗೇ ಹೋಗುತ್ತದೆ. ಜನ ನಮ್ಮ ಮನೆಗೆ, ಕಟ್ಟಡಗಳಿಗೆ ನೀರು ನುಗ್ಗಿದೆ ಎಂದು ಬೊಬ್ಬಿಡುತ್ತಾರೆ.

ಉಳಿದಿರುವ ಕೆರೆಗಳನ್ನಾದರೂ ಸರಿಯಾಗಿ ನೋಡಿಕೊಂಡಿದ್ದೇವೆಯೆ? ಪಾಲಿಕೆ ಅಧಿಕಾರಿಗಳ ಪ್ರಕಾರ, ಬೆಂಗಳೂರು ಮಹಾನಗರದಲ್ಲಿ ಪ್ರತಿ ವರ್ಷ ಕೆರೆಗಳಿಂದ 40 ಸಾವಿರ ಲೋಡ್‌ಗಳಷ್ಟು ಹೂಳೆತ್ತಲಾಗುತ್ತಿದೆ. ಅಂದರೆ ಕಳೆದ ಐದು ವರ್ಷಗಳ ಅವಧಿಯಲ್ಲಿ ಇವರು ಎತ್ತಿರುವ ಹೂಳು ಒಂದೆಡೆ ಸೇರಿಸಿದ್ದರೆ ಎರಡು ನಂದಿಬೆಟ್ಟಗಳಷ್ಟು ಎತ್ತರಕ್ಕೆ ಇರಬೇಕಿತ್ತು. ನಿಜಕ್ಕೂ ಅಷ್ಟು ಹೂಳು ಎತ್ತಿದ್ದರೆ ಅದು ಎಲ್ಲಿ ಹೋಯಿತು? ಗೊತ್ತಿಲ್ಲ. ದಾಖಲೆಗಳನ್ನು ಪರಿಶೀಲಿಸಿದರೆ ಅಷ್ಟು ಹೂಳೆತ್ತುವುದಕ್ಕೆ ಬಿಲ್‌ಗಳಂತೂ ಮಂಜೂರಾಗಿವೆ! ಕಳೆದ ಒಂದೇ ವರ್ಷ ನರ್ಮ್ ಯೋಜನೆಯಡಿ ಹೂಳೆತ್ತಲು 400 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇಷ್ಟಾದರೂ ಪ್ರತಿ ವರ್ಷ ಭಾರೀ ಮಳೆ ಬಂದಾಗ ಕೆರೆಯಲ್ಲಿ ಹೂಳು ತುಂಬಿರುವುದೇ ದೊಡ್ಡ ಸಮಸ್ಯೆಯಾಗಿ ಚರ್ಚೆಯಾಗುತ್ತದೆ.

ಚರಂಡಿಗಳಲ್ಲಿ, ರಸ್ತೆಯ ಇಕ್ಕೆಲಗಳಲ್ಲಿ ಕಸ ತುಂಬಿ ತುಳುಕುವುದು ಮಹಾನಗರಗಳ ಇನ್ನೊಂದು ವೈಶಿಷ್ಟ್ಯ. ಬೆಂಗಳೂರಿನಲ್ಲಿ ಕಳೆದ ವಾರ ಮುಗಿದ ಹಬ್ಬದ ಮರುದಿನ ಒಟ್ಟು 1800 ಟನ್ ಕಸ ತುಂಬಿತ್ತು! ಪ್ಲಾಸ್ಟಿಕ್, ಕಾಗದ, ಎಲೆ, ಘನತ್ಯಾಜ್ಯ– ಎಂದು ನಾವು ಕೈಗೆ ಸಿಕ್ಕಿದ್ದನ್ನೆಲ್ಲ ಸಾರ್ವಜನಿಕ ಸ್ಥಳಗಳಲ್ಲಿ ಎಸೆಯುತ್ತೇವೆ. ಅಧಿಕಾರಿಗಳು ಅದನ್ನು ಸಾಗಿಸುವುದರಲ್ಲೂ ಹಣಕಾಸಿನ ಗೋಲ್‌ಮಾಲ್ ನಡೆಸುತ್ತಾರೆ. ನಮ್ಮ ಕಳಪೆ ನಾಗರಿಕ ಪ್ರಜ್ಞೆ ಮತ್ತಷ್ಟು ಭ್ರಷ್ಟಾಚಾರಕ್ಕೆ ಕುಮ್ಮಕ್ಕು ಕೊಡುತ್ತದೆ. ರಾಜಕಾರಣಿಗಳು– ಕಂಟ್ರಾಕ್ಟರರು– ಅಧಿಕಾರಿಗಳ ನಡುವಣ ಅಪವಿತ್ರ ಮೈತ್ರಿ ಮುಂದುವರಿಯುತ್ತದೆ. ಈ ಮಹಾಮಳೆಯ ‘ಮಹಿಮೆ’ಗೆ ಕೊನೆ ಎಲ್ಲಿದೆ?

■ ಬಿ.ಎಂ.ಹನೀಫ್



ಈಶ್ವರ್